ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಮಂತ್ರಿಗಳು ಹಂತಹಂತವಾಗಿ ಮಾಡುತ್ತೇವೆ ಎಂದು ಹೇಳಿದರು. ಹೋಗಲಿ ನೀವು ಈ ವರ್ಷವಾದರೂ ಹೋಬಳಿ ಹೆಡ್ ಕ್ವಾರ್ಟರ್ಸ್‌ಗಳಲ್ಲಿ ನಿವೃತ್ತ ನಾರ್ಮಸ್‌ಗಾದರೂ ಒಪ್ಪುತ್ತೀರಾ? ಹೋಬಳಿ ಹೆಡ್ ಕ್ವಾರ್ಟರ್ಸ್‌ನಲ್ಲಿ ಎಲ್ಲಾ ಕಡೆ ಹೈಸ್ಕೂಲ್ ಇದೆ ಎಂದು ತಪ್ಪಾಗಿ ಗೊತ್ತಿದೆ. ಹೋಬಳಿ ಹೆಡ್ ಕ್ವಾರ್ಟರ್ಸ್ ಅಂದರೆ ೪-೫ ಸಾವಿರ ಜನ ಇರುತ್ತಾರೆ ಎಂದು ತಪ್ಪಾಗಿ ಗೊತ್ತು. ಇನ್ನೇನೂ ಇಲ್ಲದೇ ಇದ್ದರೂ ಕೂಡ ಹೋಬಳಿ ಹೆಡ್ ಕ್ವಾರ್ಟರ್ಸ್‌ಗಾದರೂ ಹಾಸ್ಪೆಲ್ ಕೊಡುವುದಕ್ಕೆ ಈ ವರ್ಷ ಪ್ರಯತ್ನ ಮಾಡುತ್ತೀರಾ?

ಶ್ರೀ ಜಿ. ಬಸವಣ್ಣಪ್ಪ.—ಮೊದಲು ಪ್ರಾರಂಭ ಮಾಡತಕ್ಕಂಥದ್ದು ಕಾಲೇಜು, ಹೈಸ್ಕೂಲ್ಸ್ ಎಲ್ಲದೆ, ಅವಶ್ಯಕತೆ ಎಲ್ಲಿದೆ ಎಲ್ಲಿ ಹಿಂದುಳಿದ ಪಂಗಡ, ಪರಿಶಿಷ್ಟ ಜಾತಿಯವರು, ಇದ್ದಾರೆ ಅಲ್ಲಿ ಮೊದಲು ಆದ್ಯತೆ ಕೊಡುತ್ತೇವೆ. ಎರಡನೆಯ ಆದ್ಯತೆ ಹೋಬಳಿಗೆ.

ಅಧ್ಯಕ್ಷರು.—ಈಗ ಕಂದಾಯ ಮಾನ್ಯ ಮಂತ್ರಿಗಳು ಬಂದಿದ್ದಾರೆ. ಅವರ ಪ್ರಶ್ನೆ ತೆಗೆದು ಕೊಳ್ಳೋಣ.

ಬನಹಟ್ಟಿಯಲ್ಲಿ ಉಪ-ನೋಂದಣಿ ಕಛೇರಿ

೬೫. ಶ್ರೀ ಬಾಬುರೆಡ್ಡಿ ತಂಗಳ್ (ಬೀಳಗಿ).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಜಮಖಂಡಿ ತಾಲ್ಲೂಕಿನ ಬನಹಟ್ಟಿಯಲ್ಲಿ ಉಪ-ನೋಂದಣಿ ಅಧಿಕಾರಿಗಳ ಕಛೇರಿಯನ್ನು ಆರಂಭಿಸುವ ಸಲಹೆ ಏನಾದರೂ ಸರ್ಕಾರದಲ್ಲಿದೆಯೇ :

ಆ) ಹಾಗಿದ್ದಲ್ಲಿ ಈ ಕಛೇರಿಯನ್ನು ಶೀಘ್ರವೇ ಆರಂಭಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

ಅ) ಹೌದು.

ಆ) ಈ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

ಶ್ರೀ ಬಾಬುರೆಡ್ಡಿ ವಿ. ತಂಗಳ್.—ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಕಂದಾಯ ಮಂತ್ರಿಗಳಿಗೆ ನನಗಿಂತ ಚೆನ್ನಾಗಿ ತಿಳಿದಿರುವಂತೆ ರಬಕವಿ, ಬನಹಟ್ಟಿ ನಗರಸಭೆ ಇರುವಂಥ ಅವಳಿ ನಗರಗಳು. ಅಲ್ಲಿಂದ ೧೦ ಮೈಲಿ ದೂರದಲ್ಲಿರುವ ತೇರದಾಳು ಮುನಿಸಿಪಾಲಿಟಿ ಇರುವಂಥ ನಗರ. ಸುತ್ತಮುತ್ತಲಿನ ೨೫ ಹಳ್ಳಿಗಳಿಗೆ ಬನಹಟ್ಟಿ ಕೇಂದ್ರಸ್ಥಾನವಾಗಿದೆ. ಬನಹಟ್ಟಿಯಲ್ಲಿ ಈಗಾಗಲೇ ಉಪ-ಖಜಾನೆ, ನ್ಯಾಯಾಲಯಗಳು, ನಾಲ್ಕಾರು ಬ್ಯಾಂಕುಗಳು, ನಾಲ್ಕಾರು ಕಾಲೇಜುಗಳು, ಕೆ ಎಸ್.ಟಿ.ಡಿ.ಸಿ., ಕೆ.ಇ.ಬಿ. ಉಪ-ವಿಭಾಗಗಳು ಎಲ್ಲಾ ಇವೆ ಆದಕಾರಣ ಜಮಖಂಡಿಯಲ್ಲಿಯ ಉಪ-ನೋಂದಣಿ ಕಛೇರಿಯ ಒತ್ತಡವನ್ನು ತಗ್ಗಿಸಲಿಕ್ಕೆ ಬನಹಟ್ಟಿಯಲ್ಲಿ ಒಂದು ಉಪ-ನೋಂದಣಿ ಕಛೇರಿಯ ಅವಶ್ಯಕತೆ ಇದೆ. ಅದನ್ನು ಶೀಘ್ರವಾಗಿ ಮಾಡಿಸಿಕೊಡಬೇಕು. ಆ ನಿಟ್ಟಿನಲ್ಲಿ ಮಾನ್ಯ ಕಂದಾಯ ಮಂತ್ರಿಗಳು ತೀವ್ರ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ತಮ್ಮ ಮುಖೇನ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದು ಅವಶ್ಯಕತೆ ಇದೆ ಎಂದು ಒಪ್ಪಿದ್ದೇನೆ. ಆದಷ್ಟು ಬೇಗ ಅಲ್ಲಿ ಪ್ರಾರಂಭ ಮಾಡುತ್ತೇನೆ.

ಪ್ರಶ್ನೆ ಸಂಖ್ಯೆ ೪೧೨, ೪೬೨, ೪೭೭, ೪೭೮ } ಮಾನ್ಯ ಸದಸ್ಯರು ಗೈರುಹಾಜರಾಗಿದ್ದಾರೆ.

ಅಧ್ಯಕ್ಷರು.—ಮಲ್ಲಾರಿಗೌಡರ ಪರವಾಗಿ, ಮಾನ್ಯ ಕೃಷ್ಣನ್‌ರವರೇ ಪ್ರಶ್ನೆಯನ್ನು ಕೇಳಿ.

ರೈತ ಸಮುದಾಯಕ್ಕೆ ಪಾಸ್ ಬುಕ್ ಕೊಡುವಲ್ಲಿ ವಿಳಂಬವಾಗುತ್ತಿರುವ ಬಗ್ಗೆ

೧೬೯. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜಮೀನು ಹಿಡುವಳಿಕೆ ಹಾಗೂ ಇನ್ನಿತರ ವಿಷಯಗಳನ್ನೊಳಗೊಂಡ ಪಾಸ್ ಬುಕ್ ಕೊಡುವುದು ಸರ್ಕಾರದಿಂದ ನಿರ್ಣಯಿಸಿದ್ದು ನಿಜವೇ ?

ಆ) ಹಾಗಿದ್ದಲ್ಲಿ ಈಗಾಗಲೇ ಪಾಸ್ ಬುಕ್ ಎಷ್ಟು ಜನರಿಗೆ ಕೊಡಲಾಗಿದೆ ?

ಇ) ರಾಜ್ಯದಾದ್ಯಂತ ಇರುವ ರೈತ ಸಮಾಜಕ್ಕೆ ಪಾಸ್ ಬುಕ್ ಮುಟ್ಟಿಸುವ ಕೊನೆಯ ದಿನಾಂಕ ಯಾವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

ಅ) ಹೌದು.

ಆ) ಇಲ್ಲ.

ಇ) ಅಂತಹ ದಿನಾಂಕವನ್ನು ನಿಗದಿಪಡಿಸಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ಪಾಸ್ ಬುಕ್ ಕೊಡಬೇಕು ಎನ್ನುವ ತೀರ್ಮಾನವನ್ನು ಯಾವಾಗ ಮಾಡಿದಿರಿ ಮಂತ್ರಿ ಜಿ.ಓ.ನ್ನು ಯಾವಾಗ ಹೊರಡಿಸಿದಿರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಬಗ್ಗೆ ೧೯೧೯-೯೯ರಲ್ಲಿ ರಂದು ಆಜ್ಞೆ ಹೊರಡಿಸಿದ್ದೇವೆ. ಈಗಾಗಲೇ ಗುಲ್ಬರ್ಗದಲ್ಲಿ ಒಂದು ತಾಲ್ಲೂಕು, ಮೈಸೂರು ವಿಭಾಗದಲ್ಲಿ ಒಂದು ತಾಲ್ಲೂಕು, ಬೆಳಗಾಂ ವಿಭಾಗದಲ್ಲಿ ಒಂದು ತಾಲ್ಲೂಕು ಮತ್ತು ಬೆಂಗಳೂರು ವಿಭಾಗದಲ್ಲಿ ಒಂದು ತಾಲ್ಲೂಕನ್ನು ತೆಗೆದು ಕೊಂಡಿದ್ದೇವೆ. ಆದಷ್ಟು ಬೇಗ ಕನಿಷ್ಟ ಪಕ್ಷ ೩ ಅಥವಾ ೪ ವರ್ಷಗಳಲ್ಲಿ, ನಮ್ಮ ಅಧಿಕಾರಿಗಳು ೫ ವರ್ಷ ಬೇಕಾಗುತ್ತದೆ ಎಂದು ಹೇಳುತ್ತಾರೆ, ಆದಷ್ಟು ಬೇಗ ಎಲ್ಲಾ ಕಡೆ ಪಾಸ್ ಬುಕ್ ಕೊಡುವ ಆಲೋಚನೆ ಇದೆ. ಇದರಲ್ಲಿ ಮುಖ್ಯವಾದ ತೊಂದರೆ ಏನೆಂದರೆ, ಪುಸ್ತಕಗಳನ್ನು ಪ್ರಿಂಟ್ ಮಾಡಿದಮೇಲೆ ಸರಿಯಾಗಿ ಬರವಣಿಗೆ ಮಾಡತಕ್ಕಂಥಾದ್ದು, ಸರಿಯಾಗಿ ಎಂಟ್ರಿ ಮಾಡತಕ್ಕಂಥಾದ್ದು ಇದೆ. ಅದಕ್ಕೆ ಸಮಯ ಹಿಡಿಯುತ್ತದೆ. ಈಗಾಗಲೇ ನಾವು ಪ್ರಾಯೋಗಿಕವಾಗಿ ಈ ಕೆಲವು ತಾಲ್ಲೂಕುಗಳನ್ನು ತೆಗೆದು ಕೊಂಡಿದ್ದೇವೆ. ಮುಂದಿನ ವರ್ಷದಿಂದ ಕನಿಷ್ಟಪಕ್ಷ ಒಂದು ತಾಲ್ಲೂಕಿನಲ್ಲಿ ಒಂದು ಹೋಬಳಿಯಲ್ಲಿ ಈ ಪಾಸ್ ಕೊಡತಕ್ಕಂಥ ಆಲೋಚನೆ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ಈಗಾಗಲೇ ಪಾಸ್ ಬುಕ್ ಎಷ್ಟು ಜನರಿಗೆ ಕೊಡಲಾಗಿದೆ ಎಂದು ಕೇಳಿದ್ದಕ್ಕೆ 'ಇಲ್ಲ' ಎಂದು ಹೇಳಿದ್ದೀರಿ. ಈಗ ನಾವು ಪ್ರಿಂಟ್ ಮಾಡಿದ್ದೇವೆ, ಪಾಸ್‌ಬುಕ್ ಕೊಟ್ಟಿದ್ದೇವೆ ಎನ್ನುವ ರೀತಿಯಲ್ಲಿ ಹೇಳುತ್ತಾ ಇದ್ದಿರಿ. ಇದಕ್ಕೂ ಅದಕ್ಕೂ ತಾರತಮ್ಯ ಇದೆ. ಏಕೆ ಕೊಟ್ಟಿಲ್ಲ ? ೧೯೯೯ರಲ್ಲಿ ನಿರ್ಧಾರಮಾಡಿ, ಈಗ ೧೯೯೮ ಆಯಿತು, ಇದುವರೆಗೆ ಕೊಟ್ಟಿಲ್ಲವಲ್ಲ ಏನು ಕಾರಣ ? ಆ ಕಾರಣಗಳು ಸಮಂಜಸವಾಗಿವೆಯೇ, ಅದನ್ನು ತಿದ್ದಿಕೊಂಡು ಯಾವಾಗ ಕೊಡುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಪುಸ್ತಕಗಳನ್ನು ಪ್ರಿಂಟ್ ಮಾಡಿ ಒಂದೊಂದು ತಾಲ್ಲೂಕಿನಲ್ಲಿ ವಿಲೇಜ್ ಅಕೌಂಟೆಂಟ್ಸ್‌ಗೆ ಹಂಚಿದ್ದೇವೆ. ಅದನ್ನು ಬರೆದು ರೈತರಿಗೆ ಕೊಡತಕ್ಕಂಥ ಕೆಲಸ ಇನ್ನೂ ಆಗಿಲ್ಲ. ಬರವಣಿಗೆ ಮುಗಿಯುತ್ತಾ ಬಂದಿದೆ. ಪ್ರತಿಯೊಂದು ಪಾಸ್ ಬುಕ್ಕಿಗೂ ಬರವಣಿಗೆ ಮಾಡಿ ಕೊಡಬೇಕಾಗುತ್ತದೆ. ಅದಕ್ಕೆ ಪ್ರಾಯೋಗಿಕವಾಗಿ ತೊಂದರೆಗಳು ಬಂತು. ಆಮೇಲೆ ಕಾನೂನು ಪ್ರಕಾರ ಕೆಲವು ಬದಲಾವಣೆ ಮಾಡಬೇಕಾಯಿತು. ಅದರ ಆಧಾರದ ಮೇಲೆ ಬ್ಯಾಂಕಿನಲ್ಲಿ ಸಾಲ ಕೊಡತಕ್ಕಂಥಾದ್ದು ಕೂಡ ಅದರಲ್ಲಿದೆ. ಕೆಲವೊಂದು ತಿದ್ದುಪಡಿಗಳನ್ನು ಮಾಡಬೇಕಾಯಿತು. ಅದಕ್ಕೋಸ್ಕರ ತಡವಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ರಾಜ್ಯದ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಎರಡು ಹೋಬಳಿಗೆ ಈ ಪುಸ್ತಕ ಕೊಡುವಂಥ ವ್ಯವಸ್ಥೆ ಮಾಡುತ್ತೀರಾ ? ಒಂದೊಂದು ತಾಲ್ಲೂಕಿನಲ್ಲಿ ೧೦ ಹೋಬಳಿಗಳು ಇವೆ. ೫ ವರ್ಷಗಳಲ್ಲಿ ಯಾರು ಇರುತ್ತಾರೋ, ಯಾರು ಹೋಗುತ್ತಾರೋ

ಗೊತ್ತಿಲ್ಲ. ಇವೊತ್ತು ರೆವಿನ್ಯೂ ಅಧಿಕಾರಿಗಳಿಗೆ ಮೊದಲು ಇದ್ದಷ್ಟು ಕೆಲಸ ಇಲ್ಲ. ಎಲ್ಲಾ ಕೆಲಸವೂ ಮಂಡಲ ಪಂಚಾಯ್ತಿಗೆ ಹೋಗಿದೆ, ಇದು ರೈತರಿಗೆ ಅನುಕೂಲವಾಗುವಂಥ ಕೆಲಸ. ಮ್ಯುಟೇಷನ್ ಕೂಡ ಕ್ಲಿಯರಾಗುತ್ತದೆ. ರೆವಿನ್ಯೂ ಅಧಿಕಾರಿಗಳಿಗೆ ಬಿಗಿಯಾಗಿ ಡೈರೆಕ್ಷನ್ ಕೊಟ್ಟು ಎರಡರೆಡು ಹೋಬಳಿಗೆ ಕೊಡುವಂತೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಇಡೀ ರಾಜ್ಯಕ್ಕೆ ಒಂದೇ ಸಲಕ್ಕೆ ಕೊಡಬೇಕೆನ್ನುವ ಇಚ್ಛೆ ನವಂಗಿದೆ. ಬರಪೀಡಿತ ಮತ್ತಿತರ ಕೆಲಸಗಳಿಂದ ಸಮಯ ಹಿಡಿಯುತ್ತಿದೆ. ಪ್ರತಿಯೊಬ್ಬ ರೈತರ ವಿಚಾರದಲ್ಲಿಯೂ ಸರಿಯಾದ ಮಾಹಿತಿಯನ್ನು ಬರೆಯಬೇಕಾಗುತ್ತದೆ. ತಪ್ಪು ಮಾಹಿತಿ ಬರೆದರೆ ಅನಾನುಕೂಲವಾಗುತ್ತದೆ. ಆದಷ್ಟು ಬೇಗ ಪಾಸು ಪುಸ್ತಕಗಳನ್ನು ಕೊಡಿಸಲಾಗುವುದು. ಹಾಗೂ ತಮ್ಮ ಸಲಹೆಯನ್ನು ಪರಿಶೀಲಿಸಲಾಗುವುದು.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಗುಂಡೂರಾಯರ ಕಾಲದಲ್ಲಿ ಫೈಲಂ ಕ್ಲಿಯರೆನ್ಸ್ ಕಾರ್ಯಕ್ರಮ ಹಾಕಿಕೊಂಡಿದ್ದರಂ. ಅದೇರೀತಿ ಪ್ರತಿ ತಾಲ್ಲೂಕಿನಲ್ಲಿಯೂ ಎರಡೆರಡು ಹೋಬಳಿಗಳಿಗೆ ಇಡೀ ರೆವಿನ್ಯೂ ಅಧಿಕಾರಿಗಳನ್ನು ಕಾನ್‌ಸೆಂಟ್ರೇಟ್ ಮಾಡಿ ಬರೆಸಿಕೊಟ್ಟರೆ ರೈತರಿಗೆ ಅನುಕೂಲ ವಾಗುತ್ತದೆ. ಮಾನ್ಯ ಬೊಮ್ಮಾಯಿಯವರು ಏತಕ್ಕೆ ಅಂಜುತ್ತಾರೋ ಗೊತ್ತಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಂಜತಕ್ಕ ಪ್ರಶ್ನೆ ಇಲ್ಲ. ಇದನ್ನು ಪ್ರಾಕ್ಟಿಕಲ್ ಆಗಿ ನೋಡಬೇಕಾಗುತ್ತದೆ. ಎಷ್ಟು ಸಾಧ್ಯವಾಗುತ್ತದೋ ಅಷ್ಟು ಕೊಡಿ ಎಂದು ಆದೇಶ ಕೊಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ.....

ಅಧ್ಯಕ್ಷರು.—ಅಯಿತಲ್ಲ, ತಾವು ವಕೀಲರಿದ್ದು, ಹೀಗೆ ಮಾಡಿದರೆ ಹೀಗೆ ?

ಶ್ರೀ ಆರ್. ವೆಂಕಟರಾಮಯ್ಯ.—ಯಾವಾಗ ಇಂಪ್ಲಿಮೆಂಟ್ ಮಾಡುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಆದಷ್ಟು ಶೀಘ್ರವಾಗಿ.

ಶ್ರೀ ಆರ್. ವೆಂಕಟರಾಮಯ್ಯ.—ಆದಷ್ಟು ಶೀಘ್ರ ಅಂದರೆ, ಒಂದು ವರ್ಷವಾಗಬಹುದು. ಆರು ತಿಂಗಳಾಗಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಹಾಗೆ, ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಈಗಾಗಲೇ ಕೆಲಸ ಪ್ರಾರಂಭ ಮಾಡಿದ್ದೇವೆ. ನೀವು ಹೇಳಿದ ಹಾಗೆ ಆದೇಶ ಕೊಡುತ್ತೇನೆ. ಒಂದು ವರ್ಷದಲ್ಲಿ ಎಷ್ಟು ಆಗುತ್ತದೆಯೋ ಅಷ್ಟನ್ನು ಕೊಡುವುದಕ್ಕೆ ಪ್ರಯತ್ನ ಮಾಡಲಾಗುವುದು.

ಕೊಲ್ಲೂರಿನಲ್ಲಿ ಅಕ್ರಮಣದಾರರಿಗೆ ಭೂಮಿ ನೀಡುವ ವಿಚಾರ.

೨೨೨. ಶ್ರೀ ಜಿ. ಎಸ್. ಆಚಾರ್ (ಬೈಂದೂರ್).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ದಕ್ಷಿಣ ಕನ್ನಡ ಜಿಲ್ಲೆಯ ಕೊಲ್ಲೂರಿನಲ್ಲಿ ಅನೇಕ ವರ್ಷಗಳಿಂದ ಭೂಮಿ ಅಕ್ರಮಣ ಮಾಡಿ ಕೊಂಡ ಸ್ಥಳೀಯರಿಗೆ ಭೂಮಿ ನೀಡಲು ಬಾಕಿಯಿರುವ ಅರ್ಜಿಗಳೆಷ್ಟು ? ಹಾಗೂ ಎಷ್ಟು ವರ್ಷ ಗಳಿಂದ ಬಾಕಿಯಿವೆ.

(ಆ) ಸ್ಥಳೀಯರಿಂದ ಅರ್ಜಿಗಳು ಬಾಕಿಯಿದ್ದರೂ ಹೊರಗಿನಿಂದ ಬಂದವರಿ ಗೆಭೂಮಿ ನೀಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಇ) ಹಾಗಿದ್ದಲ್ಲಿ ಎಷ್ಟು ಜನರಿಗೆ ಇದುವರೆವಿಗೂ ಭೂಮಿ ನೀಡಲಾಗಿದೆ. ಹಾಗಿದ್ದಲ್ಲಿ ಹೊರಗಿನಿಂದ ಬಂದವರಿಗೆ ಅದ್ಯತೆ ನೀಡಲು ಕಾರಣವೇನು ?

(ಈ) ಬಾಕಿಯಿರುವ ಅರ್ಜಿಗಳನ್ನು ಪರಿಶೀಲಿಸಿ ಯಾವಾಗ ಭೂಮಿ ನೀಡಲಾಗುವುದು.